**Akashvani : Bangalore**
**National Bulletin In Kannada**
**29.07.2024 / 13.10 hrs**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**29.07.2024 / 13.10 hrs**

**<><*<><>*><>**

**ಮುಖ್ಯಾಂಶಗಳು**

೧. ದೇಶಗಳ ಸ್ಥಿರತೆ, ಭದ್ರತೆ, ಪ್ರಗತಿಗಾಗಿ ವಿಶ್ವಾಸಾರ್ಹ ಪಾಲುದಾರರು ಹಾಗೂ ಅಂತಾರಾಷ್ಟ್ರೀಯ ಸಹಕಾರ ಅಗತ್ಯ - ಡಾ. ಎಸ್. ಜೈಶಂಕರ್

೨. ಇಂದು ಅಂತಾರಾಷ್ಟ್ರೀಯ ಹುಲಿ ದಿನ ಆಚರಣೆ; ಹುಲಿಗಳ ಸಂರಕ್ಷಣೆ ಕುರಿತು ಜಾಗೃತಿ

೩. ೭೫ನೇ ವಾರ್ಷಿಕೋತ್ಸವದ ಹಿನ್ನೆಲೆ ; ಇಂದಿನಿಂದ ಸುಪ್ರೀಂ ಕೋರ್ಟ್ ಲೋಕ ಅದಾಲತ್ ಸಪ್ತಾಹ

೪. ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟ - ೧೦ ಮೀಟರ್ ಏರ್ ರೈಫಲ್ ಶೂಟಿಂಗ್ ಸ್ಪರ್ಧೆಯ ಫೈನಲ್ ನಲ್ಲಿಂದು ಭಾರತದ ರಮಿತಾ, ಅರ್ಜುನ್ ಕಣಕ್ಕೆ

**<><*<><>*><>**

ಇದು ಸವಾಲಿನ ಸಮಯವಾಗಿದ್ದು, ಸ್ಥಿರತೆ, ಭದ್ರತೆ, ಪ್ರಗತಿಗಾಗಿ ವಿಶ್ವಾಸಾರ್ಹ ಪಾಲುದಾರರು ಮತ್ತು ಅಂತಾರಾಷ್ಟ್ರೀಯ ಸಹಕಾರದ ಅವಶ್ಯಕತೆಯಿದೆ ಎಂದು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ. ಕ್ವಾಡ್ ವಿದೇಶಾಂಗ ಸಚಿವರ ಸಭೆಯ ನಂತರ ಟೋಕಿಯೊದಲ್ಲಿ ಮಾಧ್ಯಮಗಳಿಗೆ ಮಾಹಿತಿ ನೀಡಿದ ಡಾ.ಜೈಶಂಕರ್, ಕ್ವಾಡ್ ಈಗ ವಿದೇಶಾಂಗ ನೀತಿಗಳಲ್ಲಿ ಎಷ್ಟು ಆಳವಾಗಿ ಮತ್ತು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ತೃಪ್ತಿ ವ್ಯಕ್ತಪಡಿಸಿದರು. ಇಂದಿನ ಸಭೆ ನಿರ್ದೇಶನ ನೀಡುವಲ್ಲಿ ಬಹಳ ಸಹಕಾರಿಯಾಗಿದೆ. ಸದಸ್ಯ ರಾಷ್ಟ್ರಗಳ ನಾಯಕರು ವೈಯಕ್ತಿಕವಾಗಿ ಕ್ವಾಡ್ ನ ಬೆಳವಣಿಗೆಯನ್ನು ಮುನ್ನಡೆಸಿದ್ದಾರೆ ಎಂದು ವಿದೇಶಾಂಗ ಸಚಿವರು ತಿಳಿಸಿದರು. ಜತೆಗೆ ಕಳೆದ ಕೆಲವು ವರ್ಷಗಳಲ್ಲಿ ವಿಸ್ತಾರವಾದ ಕಾರ್ಯಸೂಚಿಯನ್ನು ನಿರ್ಮಿಸಲಾಗಿದೆ ಎಂದು ಅವರು ಹೇಳಿದರು. ಇದು ವಿಶ್ವಾಸಾರ್ಹ ಟೆಲಿಕಾಂ ತಂತ್ರಜ್ಞಾನ ಮತ್ತು ಸಮುದ್ರ ಕೇಬಲ್ ಸಂಪರ್ಕದಿಂದ ಮಾನವೀಯ ಮತ್ತು ವಿಪತ್ತು ಪರಿಹಾರ ಎಚ್ಎಡಿಆರ್, ನಿರ್ಣಾಯಕ ಮತ್ತು ಉದಯೋನ್ಮುಖ ತಂತ್ರಜ್ಞಾನಗಳು, ಸೈಬರ್ ಮತ್ತು ಆರೋಗ್ಯ ಭದ್ರತೆ,

ಹವಾಮಾನ ಕ್ರಮ, ಮೂಲಸೌಕರ್ಯ, ಸಾಮರ್ಥ್ಯ ವರ್ಧನೆ ಮತ್ತು ತರಬೇತಿ, ಸ್ಟೆಮ್ ಶಿಕ್ಷಣ ಮತ್ತು ಭಯೋತ್ಪಾದನೆ ನಿಗ್ರಹದವರೆಗೆ ಕಾರ್ಯನಿರ್ವಹಿಸುತ್ತಿದೆ ಎಂದು ಡಾ.ಜೈಶಂಕರ್ ಹೇಳಿದರು.

<><*<><>*><>

ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಆಡಳಿತರೂಢ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳೊಂದಿಗೆ ಕೇಂದ್ರ ಸರ್ಕಾರದ ಯೋಜನೆಗಳ ವ್ಯಾಪ್ತಿಯನ್ನು ಹೆಚ್ಚಿಸುವ ಕ್ರಮಗಳ ಬಗ್ಗೆ ಚರ್ಚಿಸಿದ್ದಾರೆ. ಆಯಾ ರಾಜ್ಯಗಳಲ್ಲಿ ಆಡಳಿತವನ್ನು ಮತ್ತಷ್ಟು ಸುಧಾರಿಸುವ ಬಗ್ಗೆ ಪ್ರಧಾನಿ ಹಲವಾರು ಸಲಹೆಗಳನ್ನು ನೀಡಿದ್ದಾರೆ. ದೆಹಲಿಯಲ್ಲಿ ನಿನ್ನೆ ಮುಕ್ತಾಯಗೊಂಡ ಬಿಜೆಪಿ ಮುಖ್ಯಮಂತ್ರಿಗಳ ಮಂಡಳಿಯ ಎರಡು ದಿನಗಳ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ಆಡಳಿತ ಪದ್ಧತಿಗಳು ಮತ್ತು ಕಲ್ಯಾಣ ಉಪಕ್ರಮಗಳನ್ನು ಪರಿಶೀಲಿಸುವ ಗುರಿ ಸಭೆಯ ಮುಖ್ಯ ಕಾರ್ಯತಂತ್ರವಾಗಿತ್ತು.

<><*<><>*><>

ಇಂದು ಅಂತಾರಾಷ್ಟ್ರೀಯ ಹುಲಿ ದಿನ. ಹುಲಿಗಳ ಸಂರಕ್ಷಣೆ ಮತ್ತು ಅವುಗಳ ನೈಸರ್ಗಿಕ ಆವಾಸ ಸ್ಥಾನಗಳನ್ನು ರಕ್ಷಿಸುವ ಅಗತ್ಯತೆಯ ಬಗ್ಗೆ ಜಾಗೃತಿ ಮೂಡಿಸಲು ಈ ದಿನ ಸಮರ್ಪಿತವಾಗಿದೆ. ಭಾರತದಲ್ಲಿ ಹುಲಿಗಳ ಸಂಖ್ಯೆಯಲ್ಲಿ ಪ್ರತಿ ವ? ಹೆಚ್ಚಳವಾಗುತ್ತಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಮನ್ ಕಿ ಬಾತ್‌ನಲ್ಲಿ ಹುಲಿ ದಿನದ ಕುರಿತು ಉಲ್ಲೇಖಿಸಿರುವ ಅವರು, ಜಗತ್ತಿನಲ್ಲಿರುವ ಹುಲಿಗಳ ಸಂಖ್ಯೆಯ ಪೈಕಿ ಶೇಕಡಾ ೭೦ ರ? ಹುಲಿಗಳು ನಮ್ಮ ದೇಶದಲ್ಲಿವೆ. ಹುಲಿಗಳು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

<><*<><>*><>

ದೇಶದ ಸರ್ವೋಚ್ಚ ನ್ಯಾಯಾಲಯ ಸುಪ್ರೀಂ ಕೋರ್ಟ್ ತನ್ನ ೭೫ನೇ ವಾರ್ಷಿಕೋತ್ಸವದ ಸ್ಮರಣಾರ್ಥ ಇಂದಿನಿಂದ ವಿಶೇಷ ಲೋಕ ಅದಾಲತ್ ಸಪ್ತಾಹ ಆಯೋಜಿಸಲಿದೆ. ಈ ಸಂಬಂಧ ಆಕಾಶವಾಣಿ ಸುದ್ದಿ ವಿಭಾಗದೊಂದಿಗೆ ಪ್ರತ್ಯೇಕವಾಗಿ ಮಾತನಾಡಿದ ನ್ಯಾಯಮೂರ್ತಿ ಕೆ.ವಿ.ವಿಶ್ವನಾಥನ್, ಈ ಉಪಕ್ರಮವು ಸುಪ್ರೀಂ ಕೋರ್ಟ್ ನಲ್ಲಿ ಬಾಕಿ ಇರುವ ಪ್ರಕರಣಗಳನ್ನು ಪರಿಹರಿಸುವ ಗುರಿಯನ್ನು ಹೊಂದಿದೆ ಎಂದು ತಿಳಿಸಿದರು. ಲೋಕ ಅದಾಲತ್ ಅಥವಾ ಜನತಾ ನ್ಯಾಯಾಲಯದ ಲಾಭವನ್ನು ಪಡೆದುಕೊಳ್ಳುವಂತೆ ಅವರು ಕಕ್ಷಿದಾರರನ್ನು ಪ್ರೋತ್ಸಾಹಿಸಿದ್ದಾರೆ. ಈ ಉಪಕ್ರಮವು ವಿವಾದಗಳನ್ನು ಸ್ವಯಂಪ್ರೇರಿತವಾಗಿ ಮತ್ತು ಸೌಹಾರ್ದಯುತವಾಗಿ ಪರಿಹರಿಸುವ ವೇದಿಕೆಯಾಗಿದೆ ಎಂದು ಅವರು ಬಣ್ಣಿಸಿದರು.

<><*<><>*><>

ಸಂಸತ್ತಿನ ಮುಂಗಾರು ಅಧಿವೇಶನದ ಉಭಯ ಕಲಾಪಗಳು ಇಂದು ಮುಂದುವರೆಯಲಿದ್ದು, ೨೦೨೪-೨೫ರ ಕೇಂದ್ರ ಮುಂಗಡ ಪತ್ರ ಕುರಿತು ಚರ್ಚೆಗಳು ಮುಂದುವರೆಯಲಿವೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಈ ತಿಂಗಳ ೨೩ರಂದು ಬಜೆಟ್ ಮಂಡಿಸಿದ್ದರು.

<><*<><>*><>

ರಾಷ್ಟ್ರೀಯ ಶಿಕ್ಷಣ ನೀತಿ - ೨೦೨೦ರ ಅನುಷ್ಠಾನದ ನಾಲ್ಕನೇ ವಾರ್ಷಿಕೋತ್ಸವವನ್ನು ಶಿಕ್ಷಣ ಸಚಿವಾಲಯವು ಅಖಿಲ ಭಾರತೀಯ ಶಿಕ್ಷಾ ಸಮಾಗಮ ಎಬಿಎಸ್‌ಎಸ್- ೨೦೨೪ ಜತೆ ದೆಹಲಿಯ ಮಾಣೆಕ್ ಷಾ ಸೆಂಟರ್ ಸಭಾಂಗಣದಲ್ಲಿ ಇಂದು ಆಚರಿಸಲಿದೆ. ಎನ್‌ಇಪಿ-೨೦೨೦ ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ವಿವಿಧ ಮಧ್ಯಸ್ಥಗಾರರ ಬದ್ಧತೆಯನ್ನು ಪುನರುಜ್ಜೀವನಗೊಳಿಸುವ ನಿಟ್ಟಿನಲ್ಲಿ ಅಖಿಲ ಭಾರತೀಯ ಶಿಕ್ಷಾ ಸಮಾಗಮ ಎಂಬ ಪರಿಕಲ್ಪನೆಯನ್ನು ರೂಪಿಸಲಾಗಿದೆ. ಈ ಸಂದರ್ಭದಲ್ಲಿ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಎನ್‌ಇಪಿ - ೨೦೨೦ ರ ಅನುಷ್ಠಾನವನ್ನು ಮುನ್ನಡೆಸುವಲ್ಲಿ ತಮ್ಮ ಅನುಭವವನ್ನು ಹಂಚಿಕೊಳ್ಳಲಿದ್ದಾರೆ. ಧರ್ಮೇಂದ್ರ ಪ್ರಧಾನ್ ಅವರು, ವಿವಿಧ ಭಾರತೀಯ ಭಾಷೆಗಳ ಕಲಿಕೆಗೆ ಅನುಕೂಲವಾಗುವಂತೆ ಮೀಸಲಾದ ಟಿವಿ ಚಾನೆಲ್ ಗಳು ಸೇರಿದಂತೆ ಶಿಕ್ಷಣ ಇಲಾಖೆಯ ಹಲವಾರು ಪ್ರಮುಖ ಉಪಕ್ರಮಗಳನ್ನು ಸಹ ಉದ್ಘಾಟಿಸಲಿದ್ದಾರೆ.

<><*<><>*><>

ಪ್ರಸ್ತುತ ರದ್ದುಪಡಿಸಲಾಗಿರುವ ಅಬಕಾರಿ ನೀತಿಗೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ವಿರುದ್ಧ ಕೇಂದ್ರ ತನಿಖಾ ದಳ - ಸಿಬಿಐ ಇಂದು ನವದೆಹಲಿಯ ಅವೆನ್ಯೂ ನ್ಯಾಯಾಲಯದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದೆ. ತಮ್ಮ ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕರೂ ಆಗಿರುವ ಕೇಜ್ರಿವಾಲ್ ಅವರನ್ನು ಜೂನ್ ೨೬ ರಂದು ತಿಹಾರ್ ಜೈಲಿನಿಂದ ಸಿಬಿಐ ಬಂಧಿಸಿತ್ತು, ಅಲ್ಲಿ ಅವರು ಜಾರಿ ನಿರ್ದೇಶನಾಲಯ ಸಲ್ಲಿಸಿದ ಸಂಬಂಧಿತ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದರು.

<><*<><>*><>

ದೆಹಲಿಯ ಹಳೆಯ ರಾಜೆಂದರ್ ನಗರ ಪ್ರದೇಶದಲ್ಲಿ ನಿಯಮಗಳನ್ನು ಉಲ್ಲಂಘಿಸಿದ ೧೩ ಕೋಚಿಂಗ್ ಕೇಂದ್ರಗಳಿಗೆ ದೆಹಲಿ ಮುನ್ಸಿಪಲ್ ಕಾರ್ಪೊರೇಷನ್ ಬೀಗಮುದ್ರೆ ಹಾಕಿದೆ. ದೆಹಲಿಯ ಐಎಎಸ್

ಕೋಚಿಂಗ್ ಸೆಂಟರ್ ನ  ನೆಲಮಾಳಿಗೆಯಲ್ಲಿ ಹಠಾತ್ ಪ್ರವಾಹದಿಂದ ಮೂವರು ವಿದ್ಯಾರ್ಥಿಗಳನ್ನು ಬಲಿ ತೆಗೆದುಕೊಂಡ ಒಂದು ದಿನದ ನಂತರ ಈ ಕ್ರಮ ಕೈಗೊಳ್ಳಲಾಗಿದೆ.

<><*<><>*><>

ದೆಹಲಿಯಲ್ಲಿನ ಐಎಎಸ್ ಕೋಚಿಂಗ್ ಸೆಂಟರ್ ಪ್ರವಾಹ ದುರ್ಘಟನೆ ಸಂಬಂಧ ನೆಲಮಾಳಿಗೆಯ ಮಾಲೀಕರು ಮತ್ತು ಕಟ್ಟಡದ ಗೇಟ್ ಅನ್ನು ಹಾನಿಗೊಳಿಸಿದ ವ್ಯಕ್ತಿ ಸೇರಿದಂತೆ ಇನ್ನೂ ಐವರನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ ಏಳಕ್ಕೆ ಏರಿದೆ ಎಂದು ಹೇಳಲಾಗಿದೆ. ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಬದ್ಧವಾಗಿದೆ ಎಂದು ದೆಹಲಿ ಪೊಲೀಸರು ತಿಳಿಸಿದ್ದಾರೆ. ಹಾಗೆಯೇ ಎಲ್ಲಾ ಕೋನಗಳಿಂದ ತನಿಖೆ ನಡೆಯುತ್ತಿದೆ ಎಂದು ಕೇಂದ್ರ ಡಿಸಿಪಿ ಎಂ.ಹರ್ಷವರ್ಧನ್ ಹೇಳಿದ್ದಾರೆ.

<><*<><>*><>

ಆಕಾಶವಾಣಿಯ ದ್ವಿಭಾಷಾ ನೇರ ಫೋನ್ -ಇನ್ ಕಾರ್ಯಕ್ರಮ ಪಬ್ಲಿಕ್ ಸ್ಪೀಕ್‌ನಲ್ಲಿ ಮಧುಮೇಹ ತಡೆಗಟ್ಟುವುದು ಮತ್ತು ಚಿಕಿತ್ಸೆ ನೀಡುವುದರ' ಕುರಿತ ಚರ್ಚೆ ಇಂದು ರಾತ್ರಿ ೯.೩೦ ಕ್ಕೆ ಪ್ರಸಾರವಾಗಲಿದೆ.  ಕಾರ್ಯಕ್ರಮದ ವೇಳೆ ಕೇಳುಗರು ಮಧುಮೇಹದ ಲಕ್ಷಣಗಳು, ಚಿಕಿತ್ಸೆ ಮತ್ತು ತಡೆಗಟ್ಟುವಿಕೆ ಹಾಗೂ ಆರೋಗ್ಯ ಜೀವನ ಶೈಲಿಯನ್ನು ಕಾಪಾಡಿಕೊಳ್ಳುವ ಬಗ್ಗೆ ತಜ್ಞರೊಂದಿಗೆ ಪ್ರಶ್ನೆಗಳನ್ನು ಕೇಳಬಹುದು.  ಇಂದು ರಾತ್ರಿ ೯.೩೦ರಿಂದ ದೂರವಾಣಿ ಸಂಖ್ಯೆ ೦೧೧ - ೨೩೪೨೧೧೫೦ ಮತ್ತು ೦೧೧-೨೩೩೧೪೪೪೪ ಕ್ಕೆ  ಕರೆ ಮಾಡಿ ಪ್ರಶ್ನೆಗಳನ್ನು ಕೇಳಬಹುದಾಗಿದೆ. ಕೇಳುಗರು ೯೧೮೯೦೯೪೦೪೪ ಈ ವಾಟ್ಸಾಪ್ ಸಂಖ್ಯೆಗೂ ತಮ್ಮ ಸಂದೇಹಗಳನ್ನು ಕಳುಹಿಸಬಹುದಾಗಿದೆ.  ಈ ಕಾರ್ಯಕ್ರಮವನ್ನು ಆಕಾಶವಾಣಿಯ ಗೋಲ್ಡ್ ಚಾನಲ್ ಮತ್ತು ಹೆಚ್ಚುವರಿ ತರಂಗಾಂತರಗಳಲ್ಲೂ ಆಲಿಸಬಹುದಾಗಿದೆ. ಆಕಾಶವಾಣಿಯ ವೆಬ್‌ಸೈಟ್, ನ್ಯೂಸ್ ಆನ್ ಏರ್ ಡಾಟ್ ಜಿಒವಿ ಡಾಟ್ ಇನ್ ಮತ್ತು ಯೂಟ್ಯೂಬ್ ಚಾನಲ್, ನ್ಯೂಸ್ ಆನ್ ಏರ್ ಅಫೀಷಿಯಲ್‌ನಲ್ಲೂ ಕಾರ್ಯಕ್ರಮ ಲಭ್ಯವಿರಲಿದೆ.

<><*<><>*><>

ಭಾರತೀಯ ಷೇರು ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಇಂದಿನ ಆರಂಭಿಕ ವಹಿವಾಟಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿವೆ. ಆರಂಭಿಕ ವಹಿವಾಟಿನಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಕ್ರಮವಾಗಿ ೮೧ ಸಾವಿರದ ೭೪೯ ಅಂಕ ಹಾಗೂ ೨೪ ಸಾವಿರದ ೯೮೦  ಅಂಕಗಳ ಗರಿಷ್ಠ ಮಟ್ಟವನ್ನು ಮುಟ್ಟಿದವು.

<><*<><>*><>

ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದ ಮೂರನೇ ಸ್ಪರ್ಧಾ ದಿನವಾದ ಇಂದು ಮಧ್ಯಾಹ್ನ ೧ ಗಂಟೆಗೆ ರಮಿತಾ ಜಿಂದಾಲ್, ೧೦ ಮೀಟರ್ ಏರ್ ರೈಫಲ್ ಮಹಿಳಾ ಫೈನಲ್ ನಲ್ಲಿ ಸ್ಪರ್ಧಿಸಲಿದ್ದಾರೆ. ಅರ್ಜುನ್ ಬಬುಟಾ  ಇದೇ ಸ್ಪರ್ಧೆಯ ಪುರುಷರ ಫೈನಲ್  ಸ್ಪರ್ಧೆಯಲ್ಲಿ ಮಧ್ಯಾಹ್ನ ೩:೩೦ ಕ್ಕೆ ಸ್ಪರ್ಧಿಸಲಿದ್ದಾರೆ.  ಮತ್ತೊಂದೆಡೆ, ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಮನು ಭಾಕರ್, ಸರಬ್ಜೋತ್ ಸಿಂಗ್ ಮತ್ತು ಅರ್ಜುನ್ ಸಿಂಗ್ ಚೀಮಾ ಮತ್ತು ರಿದಮ್ ಸಾಂಗ್ವಾನ್ ಅವರನ್ನೊಳಗೊಂಡ ತಂಡ ೧೦ ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ಅರ್ಹತಾ ಸುತ್ತಿನಲ್ಲಿ ಇಂದು ಪಾಲ್ಗೊಳ್ಳಲಿದೆ.  ಮಧ್ಯಾಹ್ನ ೧೨:೪೫ ಕ್ಕೆ ಈ ಸ್ಪರ್ಧೆ ಆರಂಭವಾಗಲಿದೆ. ಮತ್ತೊಂದು ಶೂಟಿಂಗ್ ಸ್ಪರ್ಧೆಯಲ್ಲಿ ಪೃಥ್ವಿರಾಜ್ ತೊಂಡೈಮನ್ ಟ್ರ್ಯಾಪ್ ಪುರುಷರ ಅರ್ಹತಾ ಸುತ್ತಿನಲ್ಲಿ ಸ್ಪರ್ಧಿಸಲಿದ್ದಾರೆ. ಪುರುಷರ ಹಾಕಿಯಲ್ಲಿ ಭಾರತ ಬಿ ಗುಂಪಿನ ತನ್ನ ದ್ವಿತೀಯ ಪಂದ್ಯದಲ್ಲಿ ಅರ್ಜೆಂಟೀನಾವನ್ನು ಎದುರಿಸಲಿದೆ. ಪಂದ್ಯ ಸಂಜೆ ೪:೧೫ ಕ್ಕೆ ಆರಂಭವಾಗಲಿದೆ. ನ್ಯೂಜಿಲೆಂಡ್ ವಿರುದ್ಧ ಪ್ರಮುಖ ಗೆಲುವು ದಾಖಲಿಸಿದ ನಂತರ ಪುರುಷರು ತಮ್ಮ ಗೆಲುವಿನ ಓಟವನ್ನು ಮುಂದುವರಿಸುವ ನಿರೀಕ್ಷೆಯಲ್ಲಿದ್ದಾರೆ. ಬ್ಯಾಡ್ಮಿಂಟನ್ ಪುರುಷರ ಸಿಂಗಲ್ಸ್ ಎಲ್ ಗುಂಪಿನಲ್ಲಿ ಭಾರತದ ಸ್ಟಾರ್ ಷಟ್ಲರ್ ಲಕ್ಷ್ಯ ಸೇನ್, ಬೆಲ್ಜಿಯಂನ ಜೂಲಿಯನ್ ಕ್ಯಾರಾಗಿ ಅವರನ್ನು ಸಂಜೆ ೫:೩೦ ಕ್ಕೆ ಎದುರಿಸಲಿದ್ದಾರೆ. ಇದಕ್ಕೂ ಮುನ್ನ ಪುರುಷರ ಡಬಲ್ಸ್ ಗುಂಪು ಹಂತದಲ್ಲಿ ಭಾರತದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ, ಜರ್ಮನಿಯ ಮಾರ್ಕ್ ಮತ್ತು ಮಾರ್ವಿನ್ ಜೋಡಿಯನ್ನು ಎದುರಿಸಲಿದ್ದಾರೆ. ಮಹಿಳಾ ಡಬಲ್ಸ್ ಗ್ರೂಪ್ ಹಂತದಲ್ಲಿ ಭಾರತದ ಅಶ್ವಿನಿ ಪೊನ್ನಪ್ಪ ಮತ್ತು ತನಿಶಾ ಕ್ರಾಸ್ಟೊ ಅವರು ಜಪಾನಿನ ಚಿಹಾರು ಶಿಡಾ ಮತ್ತು ನಮಿ ಮತ್ಸುಯಾಮಾ ಅವರನ್ನು ಎದುರಿಸಲಿದ್ದಾರೆ. ಧೀರಜ್ ಬೊಮ್ಮದೇವರ, ತರುಣ್ ದೀಪ್ ಮತ್ತು ಪ್ರವೀಣ್ ರಮೇಶ್ ಜಾಧವ್ ಅವರನ್ನೊಳಗೊಂಡ ಭಾರತ ತಂಡ ಆರ್ಚರಿ ಪುರುಷರ ತಂಡ ಕ್ವಾರ್ಟರ್ ಫೈನಲ್ ನಲ್ಲಿಂದು ಸೆಣಸಲಿದೆ. ಟೇಬಲ್ ಟೆನಿಸ್ ಮಹಿಳಾ ಸಿಂಗಲ್ಸ್ ರೌಂಡ್ ೩೨ರಲ್ಲಿ ಭಾರತದ ಮಣಿಕಾ ಬಾತ್ರಾ ಅವರು ಫ್ರೆಂಚ್ ಆಟಗಾರ್ತಿ ಪೃಥ್ವಿಕಾ ಪವಾಡೆ ಅವರನ್ನು ಎದುರಿಸಲಿದ್ದಾರೆ. ಪ್ಯಾರಿಸ್ ಕೂಟದಲ್ಲಿ ಭಾರತಕ್ಕೆ ಮೊದಲ ಪದಕ ಗೆದ್ದುಕೊಟ್ಟ ಶೂಟರ್ ಮನು ಭಾಕರ್‌ಗೆ ರಾಷ್ಟ್ರಪತಿ, ಪ್ರಧಾನಿ ಸೇರಿ ಹಲವು ಗಣ್ಯರಿಂದ ಶುಭಾಶಯಗಳ ಮಹಾಪೂರವೇ ಹರಿದು ಬಂದಿದೆ. ಕಳೆದ ರಾತ್ರಿ ನಡೆದ ಟೆನಿಸ್ ಡಬಲ್ಸ್ ವಿಭಾಗದ ಪುರುಷರ ಆರಂಭಿಕ ಸುತ್ತಿನಲ್ಲಿ ಭಾರತದ ರೋಹನ್ ಬೋಪಣ್ಣ ಮತ್ತು ಶ್ರೀರಾಮ್ ಬಾಲಾಜಿ ಪರಾಭವಗೊಂಡು ಹೋರಾಟ ಮುಗಿಸಿದ್ದಾರೆ.

<><*<><>*><>

ಪಲ್ಲೆಕೆಲೆ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಮಳೆ ಬಾಧಿತ ೨ನೇ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡ ಡಕ್ವರ್ತ್ ಲೂಯಿಸ್ ನಿಯಮದನ್ವಯ ೭ ವಿಕೆಟ್ ಗಳಿಂದ

ಶ್ರೀಲಂಕಾ ತಂಡವನ್ನು ಮಣಿಸಿದೆ. ಇದರೊಂದಿಗೆ ಮೂರು ಪಂದ್ಯಗಳ ಟಿ-೨೦ ಸರಣಿಯನ್ನು ೨-೦ ಅಂತರದಲ್ಲಿ ಭಾರತ ವಶಪಡಿಸಿಕೊಂಡಿದೆ.

<><*<><>*><>

ಮುಂದಿನ ಐದು ದಿನಗಳಲ್ಲಿ ಹಿಮಾಚಲ ಪ್ರದೇಶ, ಉತ್ತರಾಖಂಡ ಮತ್ತು ಪೂರ್ವ ರಾಜಸ್ಥಾನದಲ್ಲಿ ಹಗುರದಿಂದ ಮಧ್ಯಮ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ೨.೩೦ ಕ್ಕೆ <>*><>